# ನೀವು ಕೇಳಿದಿರಿ?

ಎಂ.ಸಿ. ಧನ್ಯತಾ, ಬೆಂಗಳೂರು

ವಿದ್ಯಾಲಯಕ್ಕೂ, ಗ್ರಂಥಾಲಯಕ್ಕೂ ಏನು ಸಂಬಂಧ?



ವಿದ್ಯಾಲಯ ಅರಿವಿನ ಬೋಲ್ಟು; ಗ್ರಂಥಾಲಯ ನಟ್ಟು.

ಪಿ. ಜಯವಂತ ಪೈ, ಕುಂದಾಪುರ

ಒಲೆಗೂ, ಬಲೆಗೂ ವ್ಯತ್ಯಾಸವೇನು?

ಅಲ್ಲಿ ಉರಿ ಚೆನ್ನಾಗಿರಬೇಕು; ಇಲ್ಲಿ ಹುರಿ ಚೆನ್ನಾಗಿರಬೇಕು.

ಮೈಸೂರು ಕುಸುಮ, ಶ್ರವಣಬೆಳಗೊಳ

ನಾಯಕರು ಸಿಗರೇಟ್ ಹೊಗೆಯನ್ನು ಉಗಿಬಂಡಿಯಂತೆ ಬಿಡುವುದನ್ನು ತೋರುವ ಉದ್ದೇಶ?

ಅವರನ್ನು ಅನುಕರಿಸಿದರೆ ಹೊಗೆ ಹಾಕಿಸಿಕೊಳ್ಳುವುದು ನಿಶ್ಚಿತ ಎಂದು ಸೂಚಿಸುವುದು.

ದಿನೇಶ್, ಗುಡ್ಡದೂರು

ಚಿತ್ರರಂಗಕ್ಕೂ, ಪತ್ರಿಕಾ ರಂಗಕ್ಕೂ ವ್ಯತ್ಯಾಸ?



ಅದು ಯಕ್ಷರ ಲೋಕ, ಇದು ಅಕ್ಷರ ಲೋಕ.

ಶ್ರುತಿ ರಿಗ್ರೆಟ್ ಐಯ್ಯರ್, ಅಮೆರಿಕ

ಕುಡುಕರು ಸ್ವರ್ಗಕ್ಕೆ ಹೋಗುತ್ತಾರೋ, ನರಕಕ್ಕೋ?

ಎರಡೂ ಅಲ್ಲ; ಪಬ್‌ಗೆ, ಬಾರ್‌ಗೆ, ಪಾರ್ಟಿಗೆ.

ಬಿ. ಚಂದ್ರೇಗೌಡ, ಬೆಂಗಳೂರು

ರಾವಣನಿಂದ ಅಪಹರಣಗೊಂಡ ಸೀತೆಯು ಅಶೋಕವನದಲ್ಲಿದ್ದಾಗ ಮಂಡೋದರಿ ಏನು ಮಾಡುತ್ತಿದ್ದಳು?

'ಹತ್ತು ತಲೆ ಇದ್ದೂ ತಲೆ ಇಲ್ಲದ ಕೆಲಸ ಮಾಡಿದಿರಿ' ಎಂದು ರಾವಣನಿಗೆ ಗದರುತ್ತಿದ್ದಳು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಶಿಕ್ಷಕನಿಗೆ ಬ್ಲ್ಯಾಕ್ ಬೋರ್ಡು ಮುಖ್ಯ. ಮಂತ್ರಿಗಳಿಗೆ?

ಸ್ಯಾನಿಟರಿ ಬೋರ್ಡು, ಸಿಲ್ಕ್ ಬೋರ್ಡು, ವಕ್ಫ್ ಬೋರ್ಡು...

ಮಂಡಿ ಕುಮಾರ್, ಬೆಂಗಳೂರು

ತ್ರಿಮೂರ್ತಿಗಳ ಪತ್ನಿಯರು ಯಾವಾಗಲೂ ಅವರೊಡನೆಯೇ ಇರಲು ಕಾರಣ?

ಬಿಟ್ಟರೆ ಸಿಕ್ಕಸಿಕ್ಕವರಿಗೆ ದಡ್ಡದಡ್ಡಾಗಿ ವರ ಕೊಟ್ಟು ಕಷ್ಟಕ್ಕೆ ಸಿಲುಕುವರೆಂಬ ಭಯ.

ಕಾವ್ಯಶ್ರೀ, ಶೋರಾಪುರ

'ಸಮಾಧಿ ಸ್ಥಿತಿ' ಎಂದರೇನು?

ಆಸ್ಪತ್ರೆಯಲ್ಲಿ ವೆಂಟಿಲೇಟರ್ ತೆಗೆದ ಕೂಡಲೆ ರೋಗಿಗೆ ಒದಗುವ ಸ್ಥಿತಿ.

ಸಿ.ಕೆ. ಗಣಪ್ಪನವರ, ಮುಂಡರಗಿ

ನಿಮ್ಮ ನಿರ್ದೇಶನದಲ್ಲಿ 'ನೀವು ಕೇಳಿದಿರಿ' ಎಂಬ ಚಿತ್ರ ಮಾಡಬೇಕೆಂದಿರುವೆ...?

ಎಚ್ಚರ! ಪ್ರಶ್ನಿಸುವ ಪ್ರಮುಖರೆಲ್ಲ ಹೀರೊ ಪಾರ್ಟ್ ಬೇಕೆಂದು ಕ್ಯೂ ನಿಲ್ಲುವ ಸಾಧ್ಯತೆಯಿದೆ.

ರಾಜೇಂದ್ರ ಹೆಗಡೆ, ಹಾವೇರಿ

ಇನ್ನೂ 'ಸುಧಾ' ಬರುತ್ತಿದೆಯಾ ಎಂದು ಹಿರಿಯರೂ, ಗಣ್ಯರೂ, ಸಾಹಿತಿಗಳೂ ಕೇಳುತ್ತಿರುವರಲ್ಲ?

'ಅವರು ಇನ್ನೂ ಇದ್ದಾರಾ?' ಎಂಬ ನೀಚತನಕ್ಕೆ 'ಸುಧಾ' ಇಳಿಯಳು.

ಮಂಜಪ್ಪ ಎಚ್, ಸಂತೆಬೆನ್ನೂರು

ಸಂಚಿಕೆಗೊಂದು ಬಹುಮಾನಿತ ಪ್ರಶ್ನೆ ಇರುತ್ತದೆ. ಆದರೆ ನಿಮ್ಮೆಲ್ಲ ಉತ್ತರಗಳೂ ಬಹುಮಾನಿತವಾಗೇ ಇವೆಯಲ್ಲ?

ಇರಲೇಬೇಕೆಂದು ಯತ್ನಿಸುವೆ. ಶಿಖರದಲ್ಲಿರುವವನಿಗೆ ಜಾರುವ ಹಕ್ಕಿಲ್ಲ.

ಉಷಾ ಸೋಗಲ್, ಬೆಂಗಳೂರು

ಈಗೀಗ ಶನೀಶ್ವರನ ದೇಗುಲಕ್ಕೆ ಗಂಡಸರೇ ಹೆಚ್ಚಾಗಿ ಹೋಗಲು ಕಾರಣವೇನು?

ಅವರಿಗೆ 'ವಕ್ರಿಸಿದ ಶನಿ' ಎಂಬ ಸ್ವಾಗತ ದೊರೆಯದಿರುವುದು ಇಲ್ಲೊಂದೇ ಕಡೆಯಂತೆ!

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ

ಎಲ್ಲದರಲ್ಲೂ ಮುಂದಿರುವ ಚೀನಾದವರು ಕ್ರಿಕೆಟ್ ಏಕೆ ಆಡುವುದಿಲ್ಲ?

ಹೊಡೆದು ಓಡುವುದರಲ್ಲಿ ಪರಿಣತಿ ಇದ್ದರೂ ಅನ್ಯರಿಂದ ಹಿಡಿಯಲ್ಪಡಲು (ಕ್ಯಾಚ್) ಇಚ್ಛಿಸುವುದಿಲ್ಲ.

ಆಶಾ ಅಪ್ರಮೇಯ, ದಾವಣಗೆರೆ

ಇತ್ತೀಚಿನ ಟಿ.ವಿ. ಧಾರಾವಾಹಿಗಳಲ್ಲಿ ಅಜ್ಜಿಯ ಪಾತ್ರಧಾರಿಗಳೂ ಯುವತಿಯರಂತೆ ಕಂಗೊಳಿಸುವರಲ್ಲ?

ವಾಹ್! ನಿಮ್ಮ ಮಾತನ್ನು ಕೇಳಿ ಮೇಕಪ್ ಮ್ಯಾನ್ ಖುಷ್ ಹುವಾ!

ವಸುಂಧರಾ ಸತ್ಯ, ದೊಡ್ಡಬಳ್ಳಾಪುರ

ಮೊಸರಿನಲ್ಲಿ ಕಲ್ಲು ಹುಡುಕುವುದು ಎಂದರೆ?

ರಾಜಕಾರಣೆಯಲ್ಲಿ ಪ್ರಾಮಾಣಿಕತೆಯನ್ನು ಹುಡುಕಿದಂತೆ.

ಬಿ.ಆರ್. ಉಷಾ, ಬೆಂಗಳೂರು

ಹೆಣ್ಣಿಗೆ ಸೀರೆ, ಬಂಗಾರದ ಆಸೆ. ಗಂಡಿಗೆ?



ಬಂಗಾರದಂತಹ ಹೆಣ್ಣಿನ ಆಸೆ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಹಾರುವ ಹಕ್ಕಿಗೆ ಮಾತ್ರ ಹಾರೈಸುತ್ತಾರಲ್ಲ?

ಹಾಗೇನಿಲ್ಲ. 'ಹಾಯಾಗಿ ಕುಳಿತಿರು ನೀನು ರಾಣಿಯ ಹಾಗೆ' ಎಂಬ ಹಾರೈಕೆಯೂ ಇದೆ.

ಫಾಲನೇತ್ರ ಸಜ್ಜನ, ಶಿರಸಿ

ಷೇರುಪೇಟೆಯಿಂದ ಆನೆ ಸಿಂಹಗಳೇಕೆ ಹೊರಗಿವೆ?

ಅವೆರಡಕ್ಕೂ ಗೂಳಿಯ ಮುನ್ನುಗ್ಗುವ, ಕರಡಿಯ ಸರಸರನೆ ಇಳಿಯುವ ಚಾಕಚಕ್ಯತೆ ಇಲ್ಲವಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು

ವಿಧಾನಸೌಧದಲ್ಲಿ ಜೇನು ಗೂಡು ಕಟ್ಟುತ್ತದೆಯೆ?

ಹೂಂ. 'ಇದಕ್ಕಿಂತ ಪ್ರಶಸ್ತ ಸ್ಥಳವಿಲ್ಲ' ಎಂದಿತಂತೆ ರಾಣಿಜೇನು.

■ ರಾಮ್